ಕರ್ನಾಟಕ ವಿಧಾನ ಪರಿಷತ್

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1572

[redacted]ಸದಸ್ಯರ ಹೆಸರು : ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ)

ಉತ್ತರಿಸುವ ದಿನಾಂಕ : 18.03.2021

<table>
<tr><th>ಕ್ರ ಸಂ:</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಆಲಮಟ್ಟಿ ಅಣೆಕಟ್ಟೆಯ ಎತ್ತರವನ್ನು 519.6 ರಿಂದ 524.256 ವರೆಗೆ ಏರಿಸಿದಾಗ ಮುಳುಗಡೆಯಾಗುವ ಹಳ್ಳಿಗಳ ಸಂಖ್ಯೆ ಎಷ್ಟು;</td><td>ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3ರಲ್ಲಿ ಆಲಮಟ್ಟಿ ಜಲಾಶಯದ ನೀರಿನ ಸಂಗ್ರಹಣೆ ಮಟ್ಟ ಆರ್.ಎಲ್. 519.60 ರಿಂದ ಆರ್.ಎಲ್. 524.256 ಮೀ. ವರೆಗೆ ಎತ್ತರಿಸಿದಾಗ ಹಿನ್ನೀರಿನಲ್ಲಿ 20 ಗ್ರಾಮಗಳು ಮುಳುಗಡೆ ಹೊಂದಲಿವೆ.</td></tr>
<tr><td>ಆ)</td><td>ಅಣೆಕಟ್ಟೆಯನ್ನು ಸದರಿ ಎತ್ತರಕ್ಕೆ ಏರಿಸಿದಾಗ ಮುಳುಗಡೆಯಾಗುವ ಹಳ್ಳಿಗಳನ್ನು ಸ್ಥಳಾಂತರಿಸಲು ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಕೇಂದ್ರಗಳನ್ನು ಪ್ರಾರಂಭಿಸಲು ಈಗಾಗಲೇ ಎಷ್ಟು ಗ್ರಾಮಗಳಿಗೆ ಜಮೀನುಗಳನ್ನು ಭೂಸ್ವಾಧೀನ ಪಡಿಸಿಕೊಳ್ಳಲಾಗಿದೆ;</td><td>ಮುಳುಗಡೆಯಾಗುವ 20 ಗ್ರಾಮಗಳ ಪೈಕಿ 8 ಗ್ರಾಮಗಳನ್ನು ಸ್ಥಳಾಂತರಿಸಲು 1542 ಎ–33 ಗುಂಟೆಗೆ ಜಮೀನನ್ನು ಭೂಸ್ವಾಧೀನ ಪಡಿಸಿಕೊಳ್ಳಲಾಗಿದೆ.</td></tr>
<tr><td>ಇ)</td><td>ಇನ್ನೂ ಭೂಸ್ವಾಧೀನ ಪಡಿಸಿಕೊಳ್ಳದೇ ಇರುವ ಗ್ರಾಮಗಳನ್ನು ಸ್ಥಳಾಂತರಿಸುವುದಕ್ಕಾಗಿ ಯಾವ ಕಾಲಮಿತಿಯಲ್ಲಿ ಜಮೀನುಗಳನ್ನು ಭೂಸ್ವಾಧೀನ ಪಡಿಸಿಕೊಳ್ಳಲಾಗುವುದು;</td><td>ಕೃ.ಮೇ.ಯೋ. ಹಂತ–3 ಯೋಜನೆಯಡಿ ಮುಳಗಡೆ ಹೊಂದಲಿರುವ 20 ಗ್ರಾಮಗಳ ಪೈಕಿ ಈ ಕೆಳಕಂಡಂತೆ 12 ಗ್ರಾಮಗಳಿಗೆ ತಡೆಗೋಡೆ ನಿರ್ಮಿಸುವ (Providing innovative solutions of Protection Bunds) ತಾಂತ್ರಿಕ ಪರಿಹಾರದ ಕ್ರಮಗಳ ಕುರಿತಾಗಿ ಸಮಾಲೋಚಕರಿಂದ ತಾಂತ್ರಿಕ ಸಾಧ್ಯಾಸಾಧ್ಯತೆಯ ಪ್ರಸ್ತಾವನೆಯನ್ನು ಪಡೆಯಲಾಗಿರುತ್ತದೆ.

ಸದರಿ ಪ್ರಸ್ತಾಪಿತ ತಾಂತ್ರಿಕ ಪರಿಹಾರದ ವಿಸ್ತೃತ ಯೋಜನಾ ವರದಿಯನ್ನು ಕೃಷ್ಣಾ ಭಾಗ್ಯ ಜಲ ನಿಗಮದ ತಾಂತ್ರಿಕ ಉಪಸಮಿತಿಯಲ್ಲಿ ಹಾಗೂ ತಾಂತ್ರಿಕ ಪರಿಣಿತರಿಂದ ಪರಿಶೀಲನೆಗೆ ಒಳಪಡಿಸಿದ್ದು, ದಿನಾಂಕ:09.07.2019ರಂದು ಜರುಗಿದ ನಿಗಮದ ನಿರ್ದೇಶಕ ಮಂಡಳಿ 121ನೇ ಸಭೆಯಲ್ಲಿ ಚರ್ಚಿಸಿ ಪ್ರಸ್ತಾವನೆಗೆ ಆಡಳಿತಾತ್ಮಕ ಅನುಮೋದನೆ ಕೋರಲು ತಿರುವಳಿ ನೀಡಲಾಗಿದ್ದು, ಪ್ರಸ್ತುತ ಪ್ರಸ್ತಾವನೆ ಪರಿಶೀಲನಾ ಹಂತದಲ್ಲಿರುತ್ತದೆ.

<table><tr><td>1. ಬಾವಲತ್ತಿ</td><td>5. ಸನಾಳ</td><td>9. ಗೋವಿಂದಕೊಪ್ಪ</td></tr><tr><td>2. ಕೊಪ್ಪ ಎಸ್.ಕೆ.</td><td>6. ಕುಂಬಾರಹಳ್ಳ</td><td>10. ಉದಗಟ್ಟಿ</td></tr><tr><td>3. ವಂದಾಲ</td><td>7. ಕಾತರಕಿ</td><td>11. ಕಲಾದಗಿ</td></tr><tr><td>4. ಹಿರೇಪಡಸಲಗಿ</td><td>8. ಆಲಗುಂಡಿ ಬಿ.ಕೆ.</td><td>12. ಗದ್ದನಕೇರಿ</td></tr></table></td></tr>
<tr><td>ಈ)</td><td>3ನೇ ಹಂತದ ಯೋಜನೆಯಲ್ಲಿ ಗ್ರಾಮಗಳನ್ನು ಸ್ಥಳಾಂತರಿಸಿ, ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಕೇಂದ್ರಗಳನ್ನು ಮಾಡುವಲ್ಲಿ ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು;</td><td>ಕೃಷ್ಣಾ ಮೇಲ್ದಂಡೆ ಯೋಜನೆ ಹಂತ–3ರಡಿ ಆಲಮಟ್ಟಿ ಜಲಾಶಯದ ನೀರಿನ ಸಂಗ್ರಹಣೆ ಮಟ್ಟವನ್ನು ಆರ್.ಎಲ್. 519.60 ರಿಂದ 524.256 ಮೀ. ವರೆಗೆ ಎತ್ತರಿಸುವುದು ಕೃಷ್ಣಾ ನ್ಯಾಯಧೀಕರಣ–2ರ ಅಂತಿಮ ತೀರ್ಪಿನ ಕೇಂದ್ರ ಸರ್ಕಾರದ ಗೆಜೆಟ್ ಅಧಿಸೂಚನೆಗೆ ಒಳಪಟ್ಟಿದ್ದು, ಇದುವರೆವಿಗೂ ಗೆಜೆಟ್ ಅಧಿಸೂಚನೆಗೊಂಡಿರುವುದಿಲ್ಲ.</td></tr>
</table>

<table>
<tr><td></td><td></td><td>ಪ್ರಸ್ತುತ, ಕೇಂದ್ರ ಸರ್ಕಾರದಿಂದ ಕೃಷ್ಣಾ ನ್ಯಾಯಧೀಕರಣ-2ರ ಅಂತಿಮ ತೀರ್ಪಿನ ಗೆಜೆಟ್ ಅಧಿಸೂಚನೆ ಕಾಯ್ದಿರಿಸಿ ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3 ರಡಿ ಹೊಸ ಭೂಸ್ವಾಧೀನ ಕಾಯ್ದೆರನ್ವಯ ಪುನರ್ ವಸತಿ ಮತ್ತು ಪುನರ್ ನಿರ್ಮಾಣಕ್ಕೆ ಸಂಬಂಧಿಸಿದ ಕಟ್ಟೆಗಳ ಸ್ವಾಧೀನ ಮತ್ತು ಭೂಸ್ವಾಧೀನ ಪ್ರಕ್ರಿಯೆಯನ್ನು ಜಾರಿಗೊಳಿಸಲಾಗುತ್ತಿದೆ.

ಇದಲ್ಲದೇ, ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3 ರಡಿ ಮುಳಗಡೆ ಹೊಂದಲಿರುವ 20 ಗ್ರಾಮಗಳ ಪೈಕಿ 12 ಗ್ರಾಮಗಳಿಗೆ ತಡೆಗೋಡೆ ನಿರ್ಮಿಸುವ (Providing innovative solutions of Protection Bunds) ತಾಂತ್ರಿಕ ಪರಿಹಾರದ ಕ್ರಮಗಳ ಕುರಿತಾಗಿ ಪ್ರಸ್ತಾವನೆ ಪರಿಶೀಲನಾ ಹಂತದಲ್ಲಿರುತ್ತದೆ.</td></tr>
<tr><td>ಉ)</td><td>ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಕೇಂದ್ರಗಳಿಗಾಗಿ ಭೂಸ್ವಾಧೀನ ಪಡಿಸಿಕೊಂಡ ಸ್ಥಳಗಳಲ್ಲಿ ನಾಗರೀಕ ಸೌಲಭ್ಯಗಳನ್ನು ಒದಗಿಸಲು ಯಾವ ಯಾವ ಕಾಮಗಾರಿಗಳನ್ನು ಹಮ್ಮಿಕೊಳ್ಳಲಾಗಿದೆ; ಹಾಗೂ ಸದರಿ ಕಾಮಗಾರಿಗಳು ಕಾರ್ಯಾರಂಭವಾಗಿವೆಯೇ; ಹಾಗಿದ್ದಲ್ಲಿ, ಅವುಗಳ ಪ್ರಸ್ತುತ ಯಾವ ಹಂತದಲ್ಲಿದೆ;</td><td>
<table>
<tr><th>ಕ್ರ. ಸಂ</th><th>ಪುನರ್ ವಸತಿ ಕೇಂದ್ರ</th><th>ಕಾಮಗಾರಿಯ ಹಂತ</th></tr>
<tr><td>1.</td><td>ಶಿರಬೂರ-ಮಹಾಲಬಾಗಾಯತ (ವಿಜಯಪುರ ತಾಲೂಕ)</td><td>ಲೇಔಟ್ ನಿರ್ಮಾಣ, ಆಂತರಿಕ ರಸ್ತೆಗಳು, ಬದಿಚರಂಡಿ, ಅಡ್ಡಚರಂಡಿ ಮತ್ತು ಬಸ್ಸಶೆಲ್ಟರ ಕಾಮಗಾರಿಗಳು ಪೂರ್ಣಗೊಂಡಿದ್ದು, ಶಾಲಾ ಕಟ್ಟಡ, ಅಗಸಿ ಕಟ್ಟಡ, ನೀರು ಪೂರೈಕೆ ಇತ್ಯಾದಿ ಅಭಿವೃದ್ಧಿ ಕಾಮಗಾರಿಗಳು ಪ್ರಗತಿಯಲ್ಲಿದ್ದು ಮುಕ್ತಾಯ ಹಂತದಲ್ಲಿದೆ.</td></tr>
<tr><td>2.</td><td>ಚಿಕ್ಕಗಲಗಲಿ-ಮಹಾಲಬಾಗಾಯತ (ವಿಜಯಪುರ ತಾಲೂಕ)</td><td>ಲೇಔಟ್ ನಿರ್ಮಾಣ, ಆಂತರಿಕ ರಸ್ತೆಗಳು, ಬದಿಚರಂಡಿ, ಅಡ್ಡಚರಂಡಿ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.</td></tr>
<tr><td>3.</td><td>ಚಿಕ್ಕಗಲಗಲಿ ಭಾಗ ಮತ್ತು ಶಿರಬೂರ ಭಾಗ (ಮುಧೋಳ ತಾಲೂಕ ಝುಂಜರಕೊಪ್ಪ ಗ್ರಾಮ)</td><td>ಲೇಔಟ್ ನಿರ್ಮಾಣ ಮತ್ತು ಆಂತರಿಕ ರಸ್ತೆಗಳ ನಿರ್ಮಾಣ ಕಾಮಗಾರಿಗಳು ಪೂರ್ಣಗೊಂಡಿದ್ದು ಆಂತರಿಕ ರಸ್ತೆಗಳ ಖಡೀಕರಣ, ಬದಿಚರಂಡಿ, ಅಡ್ಡಚರಂಡಿ ಇತ್ಯಾದಿ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.</td></tr>
<tr><td>4.</td><td>ಮಾಚಕನೂರು ಮತ್ತು ಚಿಕ್ಕೂರು ಗ್ರಾಮ</td><td>ವಿನ್ಯಾಸ ನಕ್ಷೆ ತಯಾರಿಸುವ ಪ್ರಕ್ರಿಯೆ ಚಾಲ್ತಿಯಲ್ಲಿದೆ.</td></tr>
<tr><td>5.</td><td>ಕುಂದರಗಿ, ಅಂಕಲಗಿ ಗ್ರಾಮ</td><td>2021-22ನೇ ಸಾಲಿನಲ್ಲಿ ಕ್ರಿಯಾ ಯೋಜನೆಯಲ್ಲಿ ಅಳವಡಿಸಿಕೊಳ್ಳಲಾಗುವುದು.</td></tr>
</table>
</td></tr>
<tr><td>ಊ)</td><td>ಇನ್ನುಳಿದ ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಕೇಂದ್ರಗಳಲ್ಲಿ ಅವಶ್ಯವಿರುವ ನಾಗರೀಕ ಸೌಲಭ್ಯಗಳನ್ನು (ಮೂಲಭೂತ ಸೌಲಭ್ಯಗಳನ್ನು) ಯಾವ ಕಾಲಮಿತಿಯಲ್ಲಿ ಒದಗಿಸಲಾಗುವುದು?</td><td>ಇನ್ನುಳಿದ ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಕೇಂದ್ರಗಳಲ್ಲಿ ಅವಶ್ಯವಿರುವ ನಾಗರೀಕ ಸೌಲಭ್ಯಗಳನ್ನು (ಮೂಲಭೂತ ಸೌಲಭ್ಯಗಳನ್ನು) ಭೂಸ್ವಾಧೀನ ಪ್ರಕ್ರಿಯೆ ಮುಗಿದ ಕೂಡಲೇ ಪ್ರಾರಂಭಿಸಿ ಪೂರ್ಣಗೊಳಿಸಲಾಗುವುದು.</td></tr>
</table>

ಸಂಖ್ಯೆ: ಜಸಂಇ 43 ಡಬ್ಲ್ಯೂಬಿಎಂ 2021

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ